<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾನಗಲ್</u>

**<u>ಸಿ. ಸಿ. ನಂ. 1196/2021</u>**

| | | | | |
|---|---|---|---|---|
| ಸಾಕ್ಷಿಧಾರರ ಹೆಸರು | : | ಮಹಮ್ಮದ ಇಸ್ಮಾಯಿಲ್ ಭಂಡಾರಿ | ಪಿಡಬ್ಲ್ಯೂ | 2 |
| ತಂದೆ:ಗಂಡನ ಹೆಸರು | : | ಮೌಲಾಸಾಬ | ಸಿಡಬ್ಲ್ಯೂ | 10 |
| ವಯಸ್ಸು | : | 68 ವರ್ಷ | | |
| ಉದ್ಯೋಗ | : | ಮನೆಕೆಲಸ | | |
| ವಾಸಸ್ಥಳ | : | ಹಾನಗಲ್ | | |

<u>ದಿನಾಂಕ **14.11.2024** ರಂದು ಸಾಕ್ಷಿಧಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ</u>

ಚಾಸಾ-1, 5 ರಿಂದ 9, 11 ರಿಂದ 36 ರ ಪರಿಚಯ ಇದೆ. 2019 ನೇ ಇಸ್ವಿಯಲ್ಲಿ ದರ್ಗಾದಲ್ಲಿ ಜಗಳವಾಯಿತು. ಸರ್ವರ್ ಭಾಷಾ, ಅನ್ವರಬಾಷಾ, ಮಹಮ್ಮದ ಬಾಷಾ, ಖಾಜಾ ಹುಸೇನ ಎಲ್ಲರೂ ಸೇರಿ ಚಾಸಾ-1 ರವರಿಗೆ ಹೊಡೆದಿರುತ್ತಾರೆ. ಓದಿಕೆ ಮಾಡಲು ಹೋದಾಗ ಹೊಡೆದರು. ಆರೋಪಿತರು ಚಾಸಾ-1 ರವರಿಗೆ ದರ್ಗಾಕ್ಕೆ ಏಕೆ ಬರುತ್ತೀರಾ, ಓದಿಕೆ ಏಕೆ ಮಾಡುತ್ತಿರಾ ಎಂದು ಹೊಡೆದರು. ಚಾಸಾ-1 ರ ತಲೆಗೆ, ಬೆನ್ನಿಗೆ, ಬುಜಕ್ಕೆ ಕಬ್ಬಿಣದ ಸಲಾಕೆಯಿಂದ ಹೊಡೆದರು. ನಂತರ ನಾವು ಜಗಳ ಬಿಡಿಸಿರುತ್ತೇವೆ. ನಂತರ ಚಾಸಾ-1 ದೂರು ಸಲ್ಲಿಸಿರುತ್ತಾರೆ. ನಂತರ ಪೋಲಿಸರು ಬಂದು ನನ್ನ ಹೇಳಿಕೆ ಪಡೆದಿರುತ್ತಾರೆ. ಪಂಚನಾಮೆ ಮಾಡಿರುತ್ತಾರೆ.

(ಈ ಹಂತದಲ್ಲಿ ಸಹಾಯಕ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

<u>: ಪಾಟೀ ಸವಾಲು : ಸಹಾಯಕ ಸರಕಾರಿ ಅಭಿಯೋಜಕರಿಂದ</u>

ಹಾನಗಲ್ ದರ್ಗಾದ ಉಸ್ತುವಾರಿಯನ್ನು ಸೈಯದ್ ಸರ್ವರ್ ಬಾಷಾ ಮಕಾನದಾರ ಮತ್ತು ಕುಟುಂಬದವರು 2010-11 ನೇ ಇಸ್ವಿಯಿಂದ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ. ನ್ಯಾಯಾಲಯದ ಆದೇಶದಂತೆ ಜಮೀನಿನ ಉತಾರ ಸಹ ಅವರ ಪರವಾಗಿ ಆಗಿತ್ತು ಎಂದರೆ ಸರಿ. ಈ ಕುರಿತು ಅವರನ್ನು ವಿಚಾರಿಸಿದಾಗ ಜಗಳ ಶುರುವಾಯಿತು ಎಂದರೆ ಸರಿ. ಈ ಕುರಿತು ವಕ್ಫ ಬೋರ್ಡನಿಂದ ಕಮಿಟಿ ಸಹ ರಚಿಸಲಾಯಿತು ಎಂದರೆ ಸರಿ. ಈ ಕಮೀಟಿಗೆ

ನಾನು ಮತ್ತು ಪಾರುಕಅಹ್ಮದ ಅಕ್ಕಿವಳ್ಳಿ ಸದಸ್ಯರಾಗಿದ್ದೆವು ಎಂದರೆ ಸರಿ. ಕಮಿಟಿ ಮಾಡಿದ್ದರಿಂದ ಜಗಳ ಶುರುವಾಯಿತು ಎಂದರೆ ಸರಿ. ಈ ಕುರಿತು ದಿನಾಂಕಃ 25.03.2019 ರಂದು ಮಕಾನದಾರ ಮತ್ತು ಅವರ ಮನೆತನದವರು 7.00 ಗಂಟೆಗೆ ಉರುಸು ಮಾಡಿ ಮೆರವಣಿಗೆ ಮಾಡಿಕೊಂಡು ಹೋಗುತ್ತಿದ್ದೇವು. ಬೆಳಗಿನ ಜಾವ 12.45 ರ ಸುಮಾರಿಗೆ ಆರೋಪಿತರು ಜಗಳ ತೆಗೆದು ಚಾಸಾ-1 ರವರಿಗೆ ಬೈದು ಬಡಿಗೆ ಮತ್ತು ಕಬ್ಬಿಣದ ಸಲಾಕೆಯಿಂದ ಹೊಡೆದರು ಎಂದರೆ ಸರಿ. ಈಗ ಓದಿ ಹೇಳಿದಂತೆ ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಆರೋಪಿತರು ಜೀವ ಬೆದರಿಕೆ ಹಾಕಿದ್ದಾರೆ ಎಂದರೆ ಸರಿ. ಈ ಕುರಿತು ಚಾಸಾ-1 ರವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಆಯ್ ಕೆ ಎಚ್ ವಕೀಲರಿಂದಃ</u>

ನಾನು ಹಾನಗಲ್ ದರ್ಗಾದ ಒಂದು ಸಮಾಜಕ್ಕೆ ಸದಸ್ಯ ಇದ್ದೆ ಎಂದರೆ ಸರಿ. ಅನಾದಿ ಕಾಲದಿಂದಲೂ ಮಕಾನದಾರ ಕುಟುಂಬದವರು ಪೂಜೆ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ. 1 ನೇ ಆರೋಪಿಯೇ ಸದರಿ ದರ್ಗಾದ ಖಾಯಂ ತರೀಖ ಉಸ್ತುವಾರಿ ಎಂದರೆ ಸರಿಯಲ್ಲ. ಘಟನೆ ತಾರೀಖು ಹೇಳಲು ಬರುವುದಿಲ್ಲ. ಚಾಸಾ-1 ಖಾಯಂತರೀಖ ಸವಣೂರಿನ ವಾಸಿ ಎಂದರೆ ಸರಿ. ಚಾಸಾ-1 ಯಾವ ತಾರೀಖಿನಂದು ದರ್ಗಾಕ್ಕೆ ಬಂದಿದ್ದರು ಹೇಳಲು ಬರುವುದಿಲ್ಲ ಉರುಸಿಗೆ ಬಂದಿದ್ದರು ಎಂದು ನುಡಿಯುತ್ತಾರೆ. ಚಾಸಾ-1 ರವರು ಹಾನಗಲ್ ನ ಅಳಿಯ. ಕಮಿಟಿಗೆ ಯಾವುದೇ ಕಾನೂನುಬದ್ದವಾದ ಸ್ಥಾನಮಾನ ಇಲ್ಲ ಎಂದರೆ ಸರಿಯಲ್ಲ. ಕಮಿಟಿಯ ಅಧ್ಯಕ್ಷ ಪಾರೂಕಅಹ್ಮದ ಅಕ್ಕಿವಳ್ಳಿ ಅವರು ಸ್ಟೇ ಇದ್ದರೂ ಉರುಸು ಮಾಡಿ ಅಡೆತಡೆ ಮಾಡಿದ್ದಕ್ಕೆ ನ್ಯಾಯಾಲಯದಿಂದ ಶಿಕ್ಷೆ ಆಗಿದೆ ಎಂದರೆ ಸರಿಯಲ್ಲ. ಒಂದು ದಿನ ಶಿಕ್ಷೆಯಾಗಿ ಅವರು ನ್ಯಾಯಾಲಯಕ್ಕೆ ಅಪೋಲಜಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಶಿಕ್ಷೆಯಾದ ವಿಷಯ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರ ನೆತ್ತಿಗೆ ಪೆಟ್ಟಾಗಿತ್ತು. ಚಾಸಾ-1 ರವರಿಗೆ ಸೈಯದ ಬಾಷಾ ಮಕಾನದಾರ ತಲೆಗೆ ಹೊಡೆದಿರುತ್ತಾರೆ. ಹೊಡೆದಾಗ ಎಷ್ಟು ಸಮಯ ಆಗಿತ್ತು ಹೇಳಲು ಬರುವುದಿಲ್ಲ. ಆರೋಪಿ ಹೊಡೆದಾಗ ನಾನು ಅಲ್ಲಿಯೇ ಇದ್ದೆ. 1 ನೇ ಆರೋಪಿ ಚಾಸಾ-1 ರವರಿಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ಆಗ ನಾನು ಅಲ್ಲಿ ಹಾಜರು ಇರಲಿಲ್ಲ ಎಂದರೆ ಸರಿಯಲ್ಲ. 2019 ರಲ್ಲಿ ಕಮಿಟಿ ಅಸ್ತಿತ್ವದಲ್ಲಿತ್ತು. ದೂರು ಸಲ್ಲಿಸಿದ ದಿನಾಂಕ ಹೇಳಲು ಬರುವುದಿಲ್ಲ. ದೂರು ಸಲ್ಲಿಸುವ ಕಾಲಕ್ಕೆ ನಾನು ಹಾಜರು ಇರಲಿಲ್ಲ. ಕಮಿಟಿಯ ಸದಸ್ಯರಿಗೆ ಜೀವ ಬೆದರಿಕೆ ಹಾಕಿರುತ್ತಾರೆ. ಸಮಯ ಹೇಳಲು ಬರುವುದಿಲ್ಲ. ಯಾರು ಯಾರು

ಜೀವ ಬೆದರಿಕೆ ಹಾಕಿದರು ಅಂತಾ ಹೇಳಲು ಬರುವುದಿಲ್ಲ. ಪಂಚನಾಮೆಯನ್ನು ನಮ್ಮ ಸಮಕ್ಷಮ ಮಾಡಿರುತ್ತಾರೆ. ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಪಂಚನಾಮೆ ತೋರಿಸಿದಾಗ ತನ್ನ ಸಹಿ ಇರುವುದಿಲ್ಲ ಎಂದು ಹೇಳುತ್ತಾರೆ. ನನ್ನ ಸಮಕ್ಷಮ ಯಾವುದೇ ಜಗಳ ಆಗಿಲ್ಲ, ಆರೋಪಿತರು ಯಾವುದೇ ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ. ದರ್ಗಾದ ಭಕ್ತರು ತಮ್ಮ ಕಾಣಿಕೆ ಮತ್ತು ದುಡ್ಡನ್ನು ಕಾಣಿಕೆ ಪೆಟ್ಟಿಗೆಗೆ ಹಾಕುತ್ತಾರೆ ಎಂದರೆ ಸರಿ. ದರ್ಗಾಕ್ಕೆ ಬಂದ ಆದಾಯದಿಂದಲೇ ಮಕಾನದಾರ ಕುಟುಂಬದವರು ಬದುಕುತ್ತಾರೆ ಎಂದರೆ ಸರಿಯಲ್ಲ. ಸದರಿ ದರ್ಗಾದ ಆದಾಯವನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದರ್ಗಾದ ಪೂಜಾರಿಕೆ ಬಿಡಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ರಿಂದ 9 ಎಲ್ಲಿ ಬೇಕಾದಲ್ಲಿ ಸಿಗುತ್ತವೆ ಎಂದರೆ ಸರಿಯಲ್ಲ. ಮು.ಮಾಲಿಗೂ ಮತ್ತು 1 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಯಾವುದೇ ಮುದ್ದೆಮಾಲಿನಿಂದ ಆರೋಪಿತರು ಹೊಡೆದಿಲ್ಲ ಎಂದರೆ ಸರಿಯಲ್ಲ.

2 ನೇ ಆರೋಪಿ ಪರ ವಕೀಲರು ಉಳಿದ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿರುತ್ತಾರೆ.

: ಮರುವಿಚಾರಣೆ : ಇಲ್ಲ.

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್